# RAKSHABANDHAN PROGRAMME

**21-August-2019**




## “ಶ್ರೀರಕ್ಷಾಬಂಧನ ಆಚರಣೆ”

ಮೈಸೂರಿನ ವಿಜಯನಗರ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ನಮ್ಮ ಕಾಲೇಜಿನಲ್ಲಿ “ಶ್ರೀರಕ್ಷಾಬಂಧನ” ಕಾರ್ಯಕ್ರಮವನ್ನು ದಿನಾಂಕ:21. 08.2019ರ ಬುಧವಾರ ಏರ್ಪಡಿಸಲಾಗಿತ್ತು. ವಿಜಯನಗರ ಶಾಖೆಯ ಮುಖ್ಯಸ್ಥರಾದ ಸಹೋದರಿ ಬಿ.ಕೆ.ಸಂಧ್ಯಾ ಅವರು ಎಲ್ಲರನ್ನುದ್ದೇಶಿಸಿ ಮಾತನಾಡುತ್ತಾ ರಕ್ಷಾಬಂಧನ ಆಚರಣೆಯ ಮಹತ್ವವನ್ನು ತಿಳಿಸಿದರು. ತ್ರಿಕರ್ಣ ಶುದ್ಧಿಯ ಉದ್ದೇಶದಿಂದ ಉಪಾಕರ್ಮವನ್ನು ಆಚರಿಸುವಂತೆಯೇ ಭ್ರಾತೃತ್ವದ ಸಂಕೇತವಾಗಿ ಶ್ರೀರಕ್ಷಾಬಂಧನವನ್ನು ಕಾಲದಿಂದಲೂ ಆಚರಿಸಿಕೊಂಡು ಬರಲಾಗುತ್ತಿದೆ ಎಂದು ಎಲ್ಲರಿಗೂ ತಿಳಿಸಿದರು.

ಕಾರ್ಯಕ್ರಮದ ಅದ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರು ವಿಶ್ವ ಭ್ರಾತೃತ್ವವನ್ನು ಸಾರಲು ಶಾಂತಿಪ್ರಿಯರಾದ ಭಾರತೀಯ ಪ್ರಜೆಗಳಾದ ನಾವುಗಳು ರಕ್ಷಾಬಂಧನವನ್ನು ಆಚರಿಸುತ್ತೇವೆ. ಅಂತೆಯೇ ವಿಶ್ವಸಂಸ್ಥೆಯಿಂದಲೂ ಶಾಂತಿಯ ಸಂಕೇತವಾಗಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯವನ್ನು ಅಂಗೀಕರಿಸಿರುವುದು ನಮಗೆಲ್ಲರಿಗೂ ಸಂತೋಷದ ಸಂಗತಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯದ ಸಹೋದರರಾದ ಶ್ರೀ ಲೋಕನಾಥ್, ಶ್ರೀ ನಂಜುಂಡಸ್ವಾಮಿ, ಸಹೋದರಿಯರಾದ ಬಿ.ಕೆ.ಅರ್ಚನಾ ಅವರುಗಳು ಭಾಗವಹಿಸಿದ್ದ ಅಧ್ಯಾಪಕರು ಹಾಗೂ ಅಧ್ಯಾಪಕೇತರರೆಲ್ಲರಿಗೂ ಗಂಧದ ತಿಲಕವನ್ನಿಟ್ಟು, ರಕ್ಷೆ ದಾರವನ್ನು ಕಟ್ಟಿ, ರಕ್ಷಾಬಂಧನವನ್ನು ಕಟ್ಟುವುದರ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.













FINAL BCOM.STUDENTS.1986-87




FINAL BCOM.STUDENTS.1986-87









